# ಆಹಾ ಸುದ್ದಿ!

★ ಸಸಿತೋಟ

ಭೂಮಿ ಸದ್ಯದಲ್ಲೇ ವಿನಾಶ ಹೊಂದಲಿದ್ದು, ನಾಯಿಗಳ ಆವಾಸಸ್ಥಾನವಾಗಲಿದೆ ಎಂಬ ಭಯವೇ? ಹಾಗಿದ್ದಲ್ಲಿ ಆ್ಯಸ್‌ಗಾರ್ಡಿಯ ಎಂಬ ದೇಶದ ನಾಗರಿಕತ್ವ ಹೊಂದಬಹುದು. ಈಗಾಗಲೇ 20 ಲಕ್ಷ ಪ್ರಜೆಗಳಿರುವ ಈ ದೇಶ ತನ್ನದೇ ಸಂವಿಧಾನ, ಪಾರ್ಲಿಮೆಂಟ್, ಕೊನೆಗೆ ಐಗೋರ್ ಅಶುರ್‌ಬೇಯ್ಲಿ ಎಂಬ ಅಧ್ಯಕ್ಷನನ್ನೂ ಹೊಂದಿದೆಯಂತೆ. ಸದಸ್ಯತ್ವ ಶುಲ್ಕ ಕೇವಲ 100 ಯುರೋ. ಹಾಗಾದರೆ ದೇಶ ಎಲ್ಲಿದೆ ಎಂಬ ಕುತೂಹಲವಿರಬಹುದು. ಸದ್ಯ ಅದು ಆನ್‌ಲೈನ್‌ನಲ್ಲಿದ್ದು, ಭವಿಷ್ಯದಲ್ಲಿ ದೇಶ ತಲುಪಬೇಕಾದರೆ ಬಾಹ್ಯಾಕಾಶಕ್ಕೆ ಹೋಗಬೇಕು.



ವೈನ್ ಅನ್ನು ಗಾಜಿನ ಲೋಟದಲ್ಲಿ, ಕೊನೆಗೆ ಸ್ಥಳೀಯವಾಗಿ ತೆಂಗಿನ ಕರಟದಲ್ಲಿ ಕುಡಿಯುವುದು ಬಹುತೇಕರಿಗೆ ಗೊತ್ತಿರಬಹುದು. ಆದರೆ ಚಪ್ಪಲಿ, ಶೂಗಳಿಂದಲೂ ಸೇವಿಸಬಹುದು ಎಂಬುದನ್ನು ಸ್ಪೇನ್‌ನಲ್ಲಿ ಇತ್ತೀಚೆಗೆ ನಡೆದ ಸ್ಯಾನ್ ಫರ್ಮಿನ್ ಉತ್ಸವದಲ್ಲಿ ತೋರಿಸಿಕೊಡಲಾಯಿತು. ಬಾರ್‌ನಲ್ಲಿ ಗಾಜಿನ ಲೋಟ ನೀಡದಿದ್ದರೆ ಕಾಲಿನ ಚಪ್ಪಲಿ ಉಪಯೋಗಕ್ಕೆ ಬರಬಹುದು!



ಪಾಕಿಸ್ತಾನದಲ್ಲಿ ಚುನಾವಣಾ ಜ್ವರ ಏರುತ್ತಿದ್ದು, ಅಭ್ಯರ್ಥಿ ಅಯಾಜ್ ಮೋತಿವಾಲಾ ಮತ ಯಾಚನೆಗೆ ಹೊಸ ಹೊಸ ಬಗೆಯ ಟ್ರಿಕ್ ಕಂಡು ಹಿಡಿಯುತ್ತಿದ್ದಾನಂತೆ. ಕಸದ ರಾಶಿಯ ಮೇಲೆ ಕೂತು, ಕೊಳಚೆ ನೀರಿನಲ್ಲಿ ಮಲಗಿ ಮತ ಕೇಳುವುದು ಆತನ ಗಿಮಿಕ್. ಈ ಡ್ರಾಮಾ ಕಿಂಗ್‌ನನ್ನು ಮತದಾರರು ಕಸದ ರಾಶಿಗೇ ಕಳಿಸುತ್ತಾರೋ ಅಥವಾ ಕಸದಿಂದ ಮೇಲಕ್ಕೆತ್ತುತ್ತಾರೋ, ಯಾವುದಕ್ಕೂ ಜುಲೈ 25ರವರೆಗೆ ಕಾಯಬೇಕು.

ಮಧ್ಯಪ್ರದೇಶದ ಎಲೆಕ್ಟ್ರಾನಿಕ್ಸ್ ಪ್ರೊಫೆಸರ್ ಸಂಜೀವ್ ಶ್ರೀವಾಸ್ತವ ಮದುವೆಯೊಂದರಲ್ಲಿ ಬಾಲಿವುಡ್ ನಟ ಹೃತಿಕ್ ರೋಶನ್‌ನಂತೆ ಡಾನ್ಸ್ ಮಾಡಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಹಿಂದೆ ಇನ್ನೊಬ್ಬ ನಟ ಗೋವಿಂದನಂತೆ ನರ್ತಿಸಿದ ವಿಡಿಯೋಗೆ ಲಕ್ಷಾಂತರ ಮಂದಿ ಲೈಕ್ ಒತ್ತಿದ್ದರಂತೆ. ಕಾಲೇಜಿನಲ್ಲಿ ಪ್ರಸಿದ್ಧಿ ಪಡೆಯದಿದ್ದರೇನಂತೆ, 'ಡಾನ್ಸಿಂಗ್ ಅಂಕಲ್' ಆಗಿ ಖ್ಯಾತಿ ಪಡೆದಿದ್ದಾರೆ ಈ ಪ್ರೊಫೆಸರ್.





ಅಮೆರಿಕದಲ್ಲಿ ಇತ್ತೀಚೆಗೆ ಪೊಲೀಸರು ಮಾದಕ ದ್ರವ್ಯಗಳ ಅಕ್ರಮ ಸಂಗ್ರಹದ ಮೇಲೆ ದಾಳಿ ನಡೆಸಿದಾಗ ಸಿಕ್ಕಿಬಿದ್ದಿದ್ದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಖದ ಆಕಾರದ ಮಾದಕ ದ್ರವ್ಯದ ಗುಳಿಗೆಗಳು. ಗುಳಿಗೆಯ ಹಿಂಭಾಗ ಟ್ರಂಪ್ ಎಂದೇ ಮುದ್ರಿಸಲಾಗಿದೆಯಂತೆ. ಟ್ರಂಪ್ ಮಾತಿನಿಂದ ಮಾತ್ರವಲ್ಲ, ನುಂಗುವುದರಿಂದಲೂ ಕಿಕ್ ನೀಡಬಲ್ಲರು!

ಬ್ರಿಟನ್ನಿನಲ್ಲಿ ಇತ್ತೀಚೆಗೆ ಸೆಂಟ್ರಲ್ ಬ್ಯಾಂಕರ್‌ಗಳ ಉನ್ನತ ಮಟ್ಟದ ಸಭೆ ನಡೆಯಿತು. ಗಹನವಾದ ಚರ್ಚೆಯೂ ನಡೆಯಿತು. ಆದರೆ ನಿರ್ಣಯವನ್ನು 2026ರಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು. ಅಷ್ಟಕ್ಕೂ ಚರ್ಚೆಯ ವಿಷಯವೇನೆಂದರೆ ರಷ್ಯಾದಲ್ಲಿ ನಡೆಯುತ್ತಿರುವ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಫಲಿತಾಂಶ ಏನಾಗಬಹುದು ಎಂದು. ಬ್ರಿಟನ್ನಿನ ಬ್ಯಾಂಕ್ ಬಡ್ಡಿದರಕ್ಕೆ ಸಂಬಂಧಪಟ್ಟ ನಿರ್ಣಯಗಳು ಎಷ್ಟೋ ಬಾರಿ ಎಂಟು ವರ್ಷಗಳ ನಂತರ ಬಹಿರಂಗವಾಗಿರುವಾಗ ಫುಟ್ಬಾಲ್‌ಗೆ ಸಂಬಂಧಿಸಿದ ನಿರ್ಣಯವನ್ನು 2026ರಲ್ಲಿ ಕೆನಡಾದಲ್ಲಿ ನಡೆಯುವ ವಿಶ್ವಕಪ್ ಪಂದ್ಯಾವಳಿ ಸಂದರ್ಭದಲ್ಲಿ ಯಾಕೆ ಪ್ರಕಟಿಸಬಾರದು?